ಸಿಸಿ ನಂ.283/2023 ಪಿಡಬ್ಲೂ :1

ದಿನಾಂಕಃ 19-09-2025 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣೀಕರಿಸಲಾಯಿತು.

**ಮುಂದುವರೆದ ಪಾಟೀ ಸವಾಲು ಆರೋಪಿಯ ಪರವಾಗಿಃ ಶ್ರೀ ಎನ್ ಎಮ್ ಎನ್ ವಕೀಲರಿಂದಃ**

4. ಆರೋಪಿ ದಿವಗಿಯಲ್ಲಿರುವ ಆಸ್ತಿಯನ್ನು ಅಡವಿಟ್ಟು ಅಡಮಾನ ಸಾಲವನ್ನು ಪಡೆದಿದ್ದರು . ಅಡಮಾನ ಸಾಲಕ್ಕಿಂತ ಮುಂಚೆ ಹೌಸಿಂಗ್ ಲೋನ್ ಕೊಟ್ಟಿದ್ದೇವು.. ದಿವಗಿ ಪ್ರಾಪರ್ಟಿ ಮಾರಾಟದಿಂದ ಬಂದಿರುವ ಹಣದಿಂದ ಅಡಮಾನದ ಸಾಲ ಕ್ಲೋಸ್ ಮಾಡಲಾಗಿದೆ. ದಿವಗಿ ಪ್ರಾಪರ್ಟಿಯನ್ನು ಯಾವ ಇವಿಯಲ್ಲಿ ಹರಾಜು ಮಾಡಲಾಗಿದೆ ಇಸವಿ ನೆನಪಿಲ್ಲ . ದಿವಗಿ ಪ್ರಾಪರ್ಟಿ ಮಾರಾಟ ಮಾಡಿದಾಗ ಅಂದಾಜು 8 ಲಕ್ಷ ಚಿಲ್ಲರೇ ಹಣ ಬಂದಿತ್ತು. ಅಡಮಾನ ಸಾಲ ಹಾಗೂ ಹೌಸಿಂಗ್ ಲೋನ್ ಎರಡು ಸೇರಿಸಿ ಈ ಕೇಸನ್ನು ದಾಖಲಿಸಿದ್ದೇನೆ ಎಂದರೆ ಸರಿಯಲ್ಲ . ಹೌಸಿಂಗ್ ಲೋನ್ ನ ಔಟ್ ಸ್ಟ್ಯಾಂಡಿಂಗ್ ಬ್ಯಾಲನ್ಸಗೆ ಆರೋಪಿ ಚೆಕ್ ನ್ನು ಕೊಟ್ಟಿದ್ದು , ಅದಕ್ಕೆ ಸಂಬಂಧಪಟ್ಟಂತೆ ಈ ಕೇಸನ್ನು ದಾಖಲಿಸಿದ್ದೇನೆ . ಅಡಮಾನ ಸಾಲ ಸಂಪೂರ್ಣ ಚುಕ್ತಾ ಆಗಿದೆ ಎಂದು ಕಂಪ್ಲೇಂಟ್ ನಲ್ಲಿ ಬರೆದಿಲ್ಲ . ಕಂಪ್ಲೇಂಟ್ ನ್ನು ಓದಿದರೆ ಆರೋಪಿ ಅಡಮಾನ ಸಾಲ ಹಾಗೂ ಹೌಸಿಂಗ್ ಲೋನ ಗೆ ಸಂಬಂಧಪಟ್ಟಂತೆ ಚೆಕ್ ನ್ನು ಕೊಟ್ಟಿದ್ದರು ಎಂದು ಬರೆದಿದೆ ಎಂದರೆ ಸರಿ . ಅಡಮಾನದ ಸಾಲ ಚುಕ್ತಾ ಆದ ಬಗ್ಗೆ ನ್ಯಾಯಾಲಯಕ್ಕೆ ದಾಖಲಾತಿಯನ್ನು ಹಾಜರುಪಡಿಸಿಲ್ಲ , ಹಾಜರುಪಡಿಸುತ್ತೇವೆ. ಅಡಮಾನ ಸಾಲ ಚುಕ್ತಾ ಆದ ಸಂಬಂಧಪಟ್ಟ ದಾಖಲಾತಿ ನಮ್ಮ ಬ್ಯಾಂಕಿನಲ್ಲಿದೆ . ಚುಕ್ತಾ ಆದ ಬಗ್ಗೆ ದಾಖಲಾತಿಯನ್ನು ಹಾಜರುಪಡಿಸಿದ್ದೇನೆಂದು ತಿಳಿದುಕೊಂಡಿದ್ದೆ , ಮುಂದಿನ ದಿನಗಳಲ್ಲಿ ದಾಖಲಾತಿಗಳನ್ನು ಹಾಜರುಪಡಿಸುತ್ತೇನೆ. ಅಡಮಾನ ಸಾಲದ ಹಣ ಆರೋಪಿ ನಮ್ಮ ಬ್ಯಾಂಕಿಗೆ ಬಂದು ಕಟ್ಟಿರುವ ಹಣ ಅಲ್ಲ ಅಂದರೆ ಸರಿ.

( ಈ ಹಂತದಲ್ಲಿ ಆರೋಪಿ ಪರ ವಕೀಲರ ವಿನಂತಿ ಮೇರೆಗೆ ಮುಂದುವರೆದ ಪಾಟೀ ಸವಾಲನ್ನು ಮುಂದೂಡಲಾಯಿತು)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಧಾನ ಪ್ರ.ದ.ನ್ಯಾದಂ., ಕುಮಟಾ.